## <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 57 / 2019</u>

ಸಿಡಬ್ಲ್ಯೂ- **35**
ಪಿಡಬ್ಲ್ಯೂ-**18**

<u>ದಿನಾಂಕಃ **04.12.2025.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | | |
|---|---|---|
| ಸಾಕ್ಷಿಯ ಹೆಸರುಃ | - | ಮಹಾಂತೇಶ |
| ತಂದೆಯ/ಗಂಡನ ಹೆಸರುಃ | - | ಗುಂಡಪ್ಪ |
| ವಯಸ್ಸುಃ | - | **45** ವರ್ಷ |
| ಉದ್ಯೋಗಃ | - | ವೃತ್ತ ನೀರಿಕ್ಷಕರು ಹರಪನಹಳ್ಳಿ ಪೋ.ಠಾಣೆ. |
| ವಾಸಸ್ಥಳಃ | - | ಹರಪನಹಳ್ಳಿ, |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಜೂನ್ 2017 ರಿಂದ ಸೆಪ್ಟಂಬರ್ 2018 ರವರ ವರೇಗೆ ನಾನು ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಕಾನೂನು ಸುವ್ಯವಸ್ಥೆ ವಿಭಾಗದಲ್ಲಿ ಆರಕ್ಷಕ ಉಪನೀರಿಕ್ಷಕ ನ್ನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಚಾಸಾ-36 ರವರು ಈ ಪ್ರಕರಣದಲ್ಲಿ ಮೃತ ಬಸವರಾಜ ತಂದೆ ಸಣ್ಣ ತಾಯಪ್ಪ ಗಿಟಿಗಿಟ್ಟಿ ರವರ ಶವ ತನಿಖಾ ವರದಿ ಮಾಡಲು ಆದೇಶ ಮಾಡಿದರು. ಯಾದಗಿರಿಯ ಸರಕಾರಿ ಆಸ್ಪತ್ರೆಯ ಶವಗಾರ ಕೋಣೆಯಲ್ಲಿ ಇದ್ದ ಮೃತನ ಶವ ಪಂಚನಾಮೆಯನ್ನು ಆತನ ಅಣ್ಣನಾದ ಶರಣಪ್ಪ ರವರ ಸಮಕ್ಷಮದಲ್ಲಿ ದಿನಾಂಕಃ 01.06.2018 ರಂದು ಬೆಳಗ್ಗೆ 6 ಗಂಟೆಯಿಂದ 7-30 ಗಂಟೆಯ ವರೇಗೆ ಪಂಚರಾದ ಚಾಸಾ-12 ಮತ್ತು 13 ರವರ ಸಮಕ್ಷಮ ನಾನು ಶವ ತನಿಖಾ ವರದಿಯನ್ನು ಮಾಡಿದ್ದೆ. ಶವಪಂಚನಾಮೆಯನ್ನು ಮಾಡುವಾಗ ಎರಡು ಭಾಗಚಿತ್ರಗಳನ್ನು ತೆಗೆದಿದ್ದೆ. ಅದೇ ರೀತಿ ಮೃತನ ಅಣ್ಣನಾದ ಶರಣಪ್ಪ ಚಾಸಾ-14 ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೆ. ಸಾಕ್ಷಿಯು ಮೃತ ಬಸವರಾಜನ ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 16 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ನಿಪಿ 16(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಎರಡು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 32 ಮತ್ತು 33 ಎಂದು ಗುರುತಿಸಲಾಯಿತು.

පාಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಜಿ.ಬಿ.ಆರ್. ರವರಿಂದಃ

ಮೃತ ಬಸವರಾಜನ ಶವ ತನಿಖಾ ವರದಿಯನ್ನು ನಿಪಿ 16 ರಂತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 32 ಮತ್ತು 33 ರಂತೆ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.